# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

### ವಾರ್ಡ್ ನಂ.71 : ಹೆಗ್ಗನಹಳ್ಳಿ

**ದಿನಾಂಕ: 07.08.2021 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ಬಿ.ಆರ್ ರವಿಕುಮಾರ್ ನೋಡಲ್ ಅಧಿಕಾರಿ, ವಾರ್ಡ್ 71 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

ಸಭೆಯಲ್ಲಿ ಹಾಜರಿದ್ದವರು:

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಬಿ.ಆರ್ ರವಿಕುಮಾರ್ | ನೋಡಲ್ ಅಧಿಕಾರಿ-ವಾರ್ಡ್ ನಂ.71, ಸಹಾಯಕ ನಿರ್ದೇಶಕರು (ಪಶುಪಾಲನೆ) |
| 2 | ಶ್ರೀ ಮಂಜುನಾಥ್ ಡಿ ಎಸ್ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು-ವಾರ್ಡ್ 71 |
| 3 | ಹೆಚ್ ಟಿ ಮುನಿರಾಜು | ಕಂದಾಯ ವಸೂಲಿಗಾರರು- ವಾರ್ಡ್ 71 |
| 4 | ವೆಂಕಟರಾಜು | ಆರ್.ಡಬ್ಲ್ಯೂ.ಐ |
| 5 | ಅನುಪಮ ಎನ್ | ಕಂದಾಯ ವಸೂಲಿಗಾರರು- ವಾರ್ಡ್ 71 |
| 6 | ಡಾ.ಸುಷ್ಮಿತಾ | ಕೋವಿಡ್ ಮೆಡಿಕಲ್ ಆಫೀಸರ್, ಟ್ರಯಾಜ್ ಸೆಂಟರ್ |
| 7 | ಸುರೇಶ್ ಕೆ ವಿ | ಸೆಕ್ಟರ್ ಆಫೀಸರ್ |
| 8 | ಡಾ.ಅಂಬರೀಶ್ | ಕೋವಿಡ್ ಅಧಿಕಾರಿ |
| 9 | ಎಂ ಎಲ್ ರವಿಕುಮಾರ್ | ಎಂ ಓ ಹೆಚ್ |
| 10 | ಎನ್ ಮುರುಳಿ | ಕಂದಾಯ ವಸೂಲಿಗಾರರು- ವಾರ್ಡ್ 71 |
| 11 | ಎಂ ಗುರು | ಕಂದಾಯ ನಿರೀಕ್ಷಕರು- ವಾರ್ಡ್ 71 |

:ನಡಾವಳಿಯ ವರದಿ:

➤ ಕಾರ್ಯದರ್ಶಿಗಳಾದ ಶ್ರೀ ಡಿ.ಎಸ್.ಮಂಜುನಾಥ್ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

- **ಕೋವಿಡ್-19, ಸಾಂಕ್ರಾಮಿಕ ರೋಗದ ಬಗ್ಗೆ**
  - ಸಭೆಯಲ್ಲಿ ರಾಮಣ್ಣ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.71 ರವರು 01/07/2021 ರಿಂದ 07/08/2021ರವರೆಗಿನ ಲಸಿಕಾಕರಣ ಹಾಗೂ ಕೋವಿಡ್ ತಪಾಸಣೆಗಾಗಿ ಸಂಬಂಧಿಸಿದ ವಿವರಗಳನ್ನು ಸಭೆಯಲ್ಲಿ ತಿಳಿಸಲಾಯಿತು.
- ಶ್ರೀ ಬಿ.ಆರ್ ರವಿಕುಮಾರ್, ನೋಡಲ್ ಅಧಿಕಾರಿರವರು ಮಾತನಾಡಿ ಕೋವಿಡ್ ಸೋಂಕು ವಾರ್ಡ್ ವ್ಯಾಪ್ತಿಯಲ್ಲಿ ಬೆರಳಣಿಕೆಯಲ್ಲಿ ಸೋಂಕು ಪತ್ತೆಯಾಗುತ್ತಿದ್ದು, ಇಳಿಕೆ ಕಾಣುತ್ತಿದ್ದರೂ ಸಹ ಮಾಸ್ಕ್ ಧರಿಸುವ ಹಾಗೂ ಸಾಮಾಜಿಕ

ಅಂತರ ಕಾಯ್ದುಕೊಳ್ಳುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತೆ ಸೂಚಿಸಿದರು ಸಾರ್ವಜನಿಕರಲ್ಲಿ ಲಸಿಕೆ ಹಾಕಿಸಿಕೊಳ್ಳುವ ಬಗ್ಗೆ ಹೆಚ್ಚಿನ ಪ್ರಚಾರ ಕೈಗೊಂಡು ಅರಿವು ಮೂಡಿಸಲು ಸೂಚಿಸಿದರು.

- <u>ಒಳಚರಂಡಿ ಮತ್ತು ನೀರು ಸಂಪರ್ಕಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ</u>
  - ವೆಂಕಟರಾಜು, ರವರು ಮಾತನಾಡುತ್ತಾ ಹೊಯ್ಸಳನಗರದ 15ನೇ & 16ನೇ ಅಡ್ಡರಸ್ತೆಯಲ್ಲಿ ಕುಡಿಯುವ ನೀರು ಸರಿಯಾಗಿ ಬರುತ್ತಿಲ್ಲ ಈ ಬಗ್ಗೆ ಕ್ರಮ ವಹಿಸಲು ಕೋರಿದರು.
    - ಈ ಬಗ್ಗೆ ನೋಡಲ್ ಅಧಿಕಾರಿರವರು ಪ್ರತಿಕ್ರಿಯಿಸಿ ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿರವರೊಂದಿಗೆ ಮಾತನಾಡಿ ಕ್ರಮಕೈಗೊಳ್ಳಲು ಸೂಚಿಸಲಾಗುವುದೆಂದು ತಿಳಿಸಿದರು.
- <u>ವಿದ್ಯುತ್ ಸಮಸ್ಯೆಗಳ ಬಗ್ಗೆ</u>
  - ವೆಂಕಟರಾಜು, ರವರು ಮಾತನಾಡುತ್ತಾ, ಸುಂಕದಕಟ್ಟೆಯ ಸಮೃದ್ಧಿ ಹೋಟೆಲ್ ಹತ್ತಿರ ವಿದ್ಯುತ್ ಕಂಬವು ವಾಲಿದ್ದು, ಅಪಾಯಕಾರಿ ಸ್ಥಿತಿಯಲ್ಲಿರುತ್ತದೆ. ಆದ್ದರಿಂದ ಬದಲಿ ಕಂಬವನ್ನು ಅಳವಡಿಸಲು ಕೋರಿದರು.
    - ಈ ಬಗ್ಗೆ ನೋಡಲ್ ಅಧಿಕಾರಿರವರು ಸ್ಥಳದಲ್ಲಿಯೇ ದೂರವಾಣಿ ಮುಖಾಂತರ ಸಂಬಂಧ ಪಟ್ಟ ಇಲಾಖಾ ಅಧಿಕಾರಿಗಳೊಂದಿಗೆ ಮಾತನಾಡಿ ಕ್ರಮವಹಿಸಲು ಸೂಚಿಸಿದರು.

➢ ಶ್ರೀ ಬಿ.ಆರ್.ರವಿಕುಮಾರ್, ನೋಡಲ್ ಅಧಿಕಾರಿ–ವಾರ್ಡ್ ನಂ.71, ರವರು ಕೋವಿಡ್–19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಬಗ್ಗೆ ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ಪರೀಕ್ಷೆ ನಡೆಸಲು ಸೂಚಿಸಿದರು ಹಾಗೂ ಮಾಸ್ಕ್ ಧರಿಸುವ ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಹಾಗೂ ಲಸಿಕೆ ಹಾಕಿಸಿಕೊಳ್ಳುವ ಬಗ್ಗೆ ಧ್ವನಿವರ್ಧಕಗಳಲ್ಲಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಸೂಚಿಸಿದರು.

- ಇದಕ್ಕೆ ಪ್ರತಿಕ್ರಿಯಿಸಿದ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ರಾಮಣ್ಣ ರವರು ಮಾತನಾಡಿ, ವಾರದಲ್ಲಿ 4–5 ವ್ಯಕ್ತಿಗಳಲ್ಲಿ ಪಾಸಿಟಿವ್ ಪ್ರಕರಣಗಳು ಕಂಡುಬರುತ್ತಿದ್ದು, ಪಾಸಿಟಿವ್ ಪ್ರಕರಣಗಳಲ್ಲಿ ಗಣನೀಯವಾದ ಇಳಿಕೆ ಕಂಡುಬಂದಿರುತ್ತದೆ. ಮಾಸ್ಕ್ ಧರಿಸಲು ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಸಾರ್ವಜನಿಕರಲ್ಲಿ ಮನವೊಲಿಸುವ ಕಾರ್ಯವನ್ನು ಸಹ ಮಾಡಲಾಗುತ್ತಿದೆ ಎಂದು ತಿಳಿಸಿದರು.

<u>BBMP SAHAYA APP:</u>

- ಡಿ.ಎಸ್.ಮಂಜುನಾಥ್ ಸಹಾಯಕ ಅಭಿಯಂತರರು, ವಾರ್ಡ್ ನಂ.71 ಮಾತನಾಡಿ ನಮ್ಮ ಇಲಾಖೆಗೆ ಸಂಬಂಧಪಟ್ಟ ದೂರುಗಳಿಗೆ ಶೀಘ್ರಗತಿಯಲ್ಲಿ ಪರಿಹಾರಕ್ರಮ ಕೈಗೊಳ್ಳುತ್ತಿದ್ದು, ಯಾವುದೇ ಸಮಸ್ಯೆಗಳು ಬಾಕಿ ಇರುವುದಿಲ್ಲ ಎಂದು ತಿಳಿಸಿದರು.
- ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡಿನ ಕುಂದುಕೊರತೆಗಳತ್ತ ಗಮನಹರಿಸಿ ವಾರ್ಡ್ ಅಭಿವೃದ್ಧಿ ಪಡಿಸಲು ಸಹಕಾರ ನೀಡಬೇಕೆಂದು ಹಾಗೂ ಕೋವಿಡ್ ಸಾಂಕ್ರಾಮಿಕವನ್ನು ತಡೆಗಟ್ಟಲು ಕೈ ಜೋಡಿಸಬೇಕೆಂದು ಮನವಿ ಮಾಡಿದರು.

ಸದಸ್ಯ ಕಾರ್ಯದರ್ಶಿ–ವಾರ್ಡ್ 71 ಹಾಗೂ
ಸಹಾಯಕ ಅಭಿಯಂತರರು,

(ಬಿ.ಆರ್ ರವಿಕುಮಾರ್)
ನೋಡಲ್ ಅಧಿಕಾರಿ ವಾರ್ಡ್–71

ಪ್ರತಿಯನ್ನು:

1) ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ, ರವರ ಆದ್ಯ ಗಮನಕ್ಕೆ ಕಳುಹಿಸಿದೆ.
2) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಂದಾಯ ಅಧಿಕಾರಿ (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
7) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.70 ರವರ ಮಾಹಿತಿಗಾಗಿ
8) ವಾರ್ಡ್ ಸಮಿತಿ ಸಭೆಯ ಸದಸ್ಯರಿಗೆ ಮಾಹಿತಿಗಾಗಿ ಕಳುಹಿಸಿದೆ.
9) ಕಛೇರಿ ಕಡತಕ್ಕೆ